ನಾ ನಿಂಗೆ!' ಅಂದವಳಿಗೆ, 'ಅದನ್ನ ಸರಿ ಮಾಡಿದ್ನಲ ಆಗಲೇ...' ಅಂತ ಸಮಜಾಯಿಷಿ ಕೊಟ್ಟ. 'ಸರಿ ಹಾಗಿದ್ರೆ, ಈಗ ಓದೋಣ ಆಯ್ತಾ?' ಹುಬ್ಬು ಕೊಂಕಿಸಿದಳು.

ಮಡಕಿಯವರ ಕುಟುಂಬ ಒಂದು ಕಾಲದಲ್ಲಿ ಕುಂಬಾರಿಕೆಯಲ್ಲಿ ಆಸುಪಾಸಿನಲ್ಲೆಲ್ಲ ಹೆಸರು ಮಾಡಿದ ಕುಟುಂಬ. ಮಣ್ಣಿನ ಪಾತ್ರೆಗಳಿಗೆ ಬೇಡಿಕೆ ಕಮ್ಮಿಯಾಗುವ ಸಮಯಕ್ಕೆ ಊರಲ್ಲಿರುವ ಆಸ್ತಿಗೆ ಇನ್ನಷ್ಟು ಹೊಲ ಗದ್ದೆಗಳನ್ನು ಸೇರಿಸಿಕೊಂಡು ರೂಢಿಸಿ ಗೌರವ ಉಳಿಸಿಕೊಂಡವರು. ರೈತರಿಗೆ ಸಿಗುವ ಬೆಳೆಸಾಲ, ವಿಮೆ ಮುಂತಾದ ಸರಕಾರಿ ಸೌಲಭ್ಯಗಳನ್ನು ಸರಿಯಾಗಿ ಬಳಸಿಕೊಂಡು ಜಮೀನನ್ನು ಊರ್ಜಿತಗೊಳಿಸಿದ್ದಾರೆ. ಟ್ರ್ಯಾಕ್ಟರಿದೆ; ಭತ್ತ ಗೊಬ್ಬರ ಸಾಗಿಸಲಲ್ಲದೆ ಪ್ರಸಂಗದಲ್ಲಿ ಮನೆಯವರ ಪ್ರಯಾಣಕ್ಕೂ ಒದಗುವಂತೆ ಹಳೆಯ ಮಾರುತಿ ವ್ಯಾನು ಕೊಂಡಿದ್ದಾರೆ. ದೂರದೃಷ್ಟಿಯ ಗಂಗಪ್ಪ ಕುಂಬಾರಿಕೆಯ ಮಾಹಿತಿಯನ್ನು ಪೂರ್ತಿ ಅಳಿದುಹೋಗಗೊಟ್ಟಿಲ್ಲ. ಹಳೆಯ ಜಾಗ ಮತ್ತು ಪರಿಕರಗಳನ್ನು ಕಾಯ್ದಿಟ್ಟಿದ್ದ. ಅದಕ್ಕೆ ತಕ್ಕಂತೆ ಈಗೀಗ ವೈಶಿಷ್ಟ್ಯದ ಹೆಸರಿನಲ್ಲಿ ಗಿರಾಕಿಗಳನ್ನು ಆಕರ್ಷಿಸುವ ಬೇರೆಬೇರೆ ಉಪಾಯ ಹುಡುಕುವ ರೆಸಾರ್ಟು ಹೋಟೆಲುಗಳು ಮಣ್ಣಿನ ತಾಂಬಾಣ, ಮಡಕೆ, ಕಲಾತ್ಮಕ ಪಾತ್ರೆಗಳನ್ನು ಬಳಸಲು ತೊಡಗಿದ್ದವು. ಪರಂಪರೆಯ ಹೆಸರಿನಲ್ಲಿ ಮಣ್ಣಿನ ಕಲಾತ್ಮಕ ಮೂರ್ತಿಗಳಲ್ಲದೆ ಪಾತ್ರೆಗಳನ್ನು ಪ್ರದರ್ಶಿಸುವ ಕೆಲ ಮಳಿಗೆಗಳು ಶಹರದಲ್ಲಿ ಅಲ್ಲಲ್ಲಿ ತಲೆಯೆತ್ತತೊಡಗಿದ್ದವು. ಸಮಯ ಸಿಕ್ಕಾಗೆಲ್ಲ ಗಂಗಪ್ಪ ಮಣ್ಣಿಂದ ಕೆಂಪು ಗುಂಡಾಲಿ, ಗಂಗಾಳಗಳನ್ನು ತಯಾರಿಸಿದವ, ಶಹರದಲ್ಲಿ ತೋರಿಸಿ ನಿಧಾನವಾಗಿ ವ್ಯಾಪಾರ ಕುದುರಿಸಿಕೊಂಡ. ಆದರೆ, ಬೇಡಿಕೆ ಏರಲಿಕ್ಕೆ ಅವರು ಬಯಸುವ ನಾಜೂಕುತನ ಇನ್ನೂ ಬರಬೇಕಿತ್ತು. ಸಿರಾಮಿಕ್ ಇಂಜನಿಯರಿಂಗಿಗೆ ಅಮರೇಶನನ್ನು ಸೇರಿಸುವಾಗ ಮುಂದೆ ದೊಡ್ಡ ಕಂಪನಿಯಲ್ಲಿ ನೌಕರಿಗೆ ಸೇರಿ ಸ್ವತಂತ್ರನಾಗಿರಲಿ ಅನ್ನುವುದೇ ಮನೆಯವರ ಬಯಕೆಯಾಗಿತ್ತು. ಆತ ಊರಿಗೇ ಬಂದು ಸ್ವಂತ ಉದ್ಯೋಗ ಸುರುಮಾಡುವ ನಿರ್ಧಾರ ಹೇಳಿದಾಗ ಯಾರಿಗೂ ಖುಷಿಯಾಗಿರಲಿಲ್ಲ. ಬಂದವ ಬ್ಯಾಂಕಿನಲ್ಲಿ ಸಾಲ ಪಡೆದು ಖಾಲಿಜಾಗದಲ್ಲಿ ತಗಡಿನ ಶೆಡ್‌ಹಾಕಿಸಿದ. ಕರೆಂಟಿಂದ ಚಲಿಸುವ ತಿಗರಿ, ಮೌಲ್ಡ್ ಮುಂತಾಗಿ ವ್ಯವಸ್ಥೆ ಮಾಡಿಕೊಂಡ. ಕಂದು, ಕೆಂಪು ಬಣ್ಣದ ಅಚ್ಚುಕಟ್ಟಾದ ತಟ್ಟೆ, ಪಾತ್ರೆಗಳನ್ನು ತಯಾರಿಸಿ ಶಹರದ ಮಳಿಗೆಗಳಲ್ಲಿ ಪ್ರದರ್ಶಿಸಿದ. ಕೆಲವರು ಖರೀದಿಸಿದರು. ಇದಿಷ್ಟು ಆದಾಯಕ್ಕಾಗಿ ಇಷ್ಟೆಲ್ಲ ಕಲಿಯಬೇಕಿತ್ತೇ ಅಂತ ಗಂಗಪ್ಪನಿಗೆ ಅಸಮಾಧಾನವಾಗಿತ್ತು. ಕ್ರಮೇಣ ಬೇಡಿಕೆ ಹೆಚ್ಚತೊಡಗಿತು. ಆದರೆ, ಅದನ್ನು ನಿಭಾಯಿಸಲು ಬಂಡವಾಳ ತೊಡಗಿಸುವ ಜೊತೆಗೆ ಕೆಲಸದವರನ್ನು ನೇಮಿಸಿಕೊಳ್ಳುವ ಅವಶ್ಯಕತೆ; ಹಾಗೆಯೇ ಅವರ ಸಂಬಳದ ಖರ್ಚೂ ಎದುರಿತ್ತು.

ಪಿಯುಸಿಯಲ್ಲಿ ಮಂದಾ ತೊಂಬತ್ತೆರಡು ಪರ್ಸೆಂಟು ಪಡೆದರೆ, ತೊರದ ತೊಂಬತ್ತಮೂರು ಪರ್ಸೆಂಟು ಪಡೆದಿದ್ದ.

'ಯಾರನ್ನ ಕೇಳಿ ಸಿಇಟಿ ತಯಾರಿ ಮಾಡತಿದಾನಂತೆ? ಇಂಜನಿಯರಿಂಗು ಮೆಡಿಕಲ್ಲು ಅಂತ ಹೊರಟರೆ ಯಾರಿಲ್ಲಿ ಜವಾಬ್ದಾರಿ ಹೊರೋರು?' ಎಂದು ಗಂಗಪ್ಪ ಸಿಡಿಮಿಡಿಯಲ್ಲಿ ಕೇಳಿದ.

'ಈ ಮನೆಯವನೆ ಅಲ್ವೇನ್ರೀ? ಅವನಿಗೊಂದು ಹಾದಿ ತೋರಸೋ ಕೆಲಸ ನಾವಲ್ದೆ ಮತ್ಯಾರು ಮಾಡತಾರೆ?' ಸುಗುಣಾ ಗಂಡನಿಗೆ ಅರ್ಥಮಾಡಿಸಲು ನೋಡಿದಳು.

'ಹೌದೇ... ಒಪ್ಪೋಣ. ಹಿರಿಯವನ ಇಂಜನಿಯರಿಂಗಿಗೆ ಖರ್ಚು ಮುಗೀತು ಅಂದರೆ, ಈಗ ನೋಡತಿದೀಯಲ್ಲ ಬಿಸಿನೆಸ್ಸಿಗೆ ಎಷ್ಟು ಬಂಡವಾಳ ಇದ್ರೂ ಸಾಲದು! ಎರಡನೆಯವನು ಆಗಲೇ ಇಂಜನಿಯರಿಂಗಿಗೆ ಸೇರಿದಾನೆ; ಅವನ ಖರ್ಚು ಇದ್ದಿದ್ದೇ. ಮತ್ತೀಗ ತೊರದನಿಗೆ ಎಲ್ಲಿಂದ ಹೊಂದಿಸೋದು? ಮಂದಾನೂ ಏನೇನು ಯೋಚಿಸಿದಾಳೋ ಯಾರಿಗ್ಗೊತ್ತು! ಅದನ್ನ ಕೇಳಿದೀಯ?'

ಇವರ ಮಾತುಕತೆಯ ವಾಸನೆ ಅಮರೇಶನಿಗೆ ಹತ್ತಿತು. ಬಿಸಿನೆಸ್ಸಿಂದಾಗಿ ಆಗಲೇ ತಲೆಬಿಸಿಯಲ್ಲಿದ್ದ. 'ಅವ ಸಾವಿನ ಮನೇಲಿ ಖಾಲಿಪೇಪರಿಗೆ ಸಹಿ ಹಾಕುವಾಗ ಯಾರನ್ನಾದರು ಕೇಳಿದ್ನೇನು? ಅವರಾದ್ರು ಹ್ಯಾಗೆ ಬರಸಿಕೊಂಡ್ರು? ಹಾಗೆ ಕೇಳಿದರೆ ಇವನ್ನ ದಾನ ಕೊಡುವಾಗಲೆ ಇವನ ಪಾಲಿನ ಆಸ್ತೀನೂ ನಿಮಗೆ ದಾಟಿಸಬೇಕಿತ್ತು... ಹೌದಿಲ್ಲೋ?' ಎಂದ.

'ಆ ಸಂದರ್ಭದಲ್ಲಿ ಇಂತದೆಲ್ಲ ಯೋಚಿಸಲಿಕ್ಕಾಗ್ತಿತ್ತೇನೋ? ಇಪ್ಪತ್ತುವರ್ಷದ ನಂತ್ರದ್ದನ್ನ ಯಾರು ಕಂಡಿದ್ರು! ಹಳೇದನ್ನ ಎಳದಾಡಿ ಏನು ಪ್ರಯೋಜನ?'